**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 21.01.2026**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಸಿ ಕೆ ವಕೀಲರಿಂದ**

ನಮ್ಮ ಯಜಮಾನರ ಹೆಸರು ಮಹೇಶ್ ಎಂದರೆ ಸರಿ . ನನ್ನ ಯಜಮಾನರ ಇನ್ನೊಂದು ಹೆಸರು ಚಿಟ್ಟಿಯಪ್ಪ . ನಿಪಿ 1 ರಲ್ಲಿ ಆರೋಪಿ ಸಹಿ ಮಾಡಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಸಹಿಯನ್ನು ನಿಪಿ 1 ರಲ್ಲಿ ಫೋರ್ಜರಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ 1 ನ್ನು ಆರೋಪಿ ನನಗೆ ನೀಡಿರುತ್ತಾರೆ. ನನ್ನ ಮಗನ ಹೆಸರು ತೇಜಸ್ ತಿಮ್ಮಯ್ಯ . ನನಗೆ ತನು ತಿಮ್ಮಯ್ಯರವರು ಪರಿಚಯವಿರುವುದಿಲ್ಲ. ತನು ತಿಮ್ಮಯ್ಯರವರು ನನಗೆ ಯಜಮಾನರ ತಂಗಿಯ ಮಗ ಎಂದರೆ ನನ್ನ ಯಜಮಾನರಿಗೆ ತಂಗಿ ಇರುವುದಿಲ್ಲ ಎಂದು ನುಡಿದರು. ನನ್ನ ಮಗ ಮತ್ತು ತನು ತಿಮ್ಮಯ್ಯರವರು ಆತ್ಮೀಯ ಸ್ನೇಹಿತರು ಎಂದರೆ ಗೊತ್ತಿಲ್ಲ. ನನ್ನ ಮಗ ಬೆಂಗಳೂರಿನಲ್ಲಿ ರಿಲಯನ್ಸ ಸೂಪರ್ ವೈಸರಾಗಿ ಕೆಲಸ ಮಾಡುತ್ತಿದ್ದರು.

ಆರೋಪಿಯಿಂದ ಪಡೆದುಕೊಂಡು ಚೆಕ್ ಖಾಲಿ ಚೆಕ್ ಆಗಿತ್ತು , ಯಾವುದೆ ಬರವಣಿಗೆ ಮತ್ತು ಸಹಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ನ್ನು ನಾನು ಭರ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಅಲ್ಲಗಳೆದಿರುತ್ತಾರೆ. ಸಾಕ್ಷಿಗೆ ಪುನಹಃ ಅದೆ ದಾಖಲಾತಿಯನ್ನು ತೋರಿಸಲಾಗಿ ನಿಪಿ 1 ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂದು ಇದ್ದು , ಸದರಿ ದಾಖಲಾತಿ ಎಂದು ಸ್ಟೇಟ ಬ್ಯಾಂಕ್ ಆಫ್ ಇಂಡಿಯಾ ಎಂದು ಇರುತ್ತದೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಪುನಹಃ ಅದೆ ದಾಖಲಾತಿಯನ್ನು ತೋರಿಸಲಾಗಿ

ನಿಪಿ 1 ರಲ್ಲಿರುವ ಸಹಿಗೂ ಮತ್ತು ಸದರಿ ದಾಖಲಾತಿಯ ಮೇಲಿರುವ ಸಹಿಯೂ ಒಂದೇ ಇರುತ್ತದಾ ಎಂದರೆ ನನಗೆ ಗೊತ್ತಿಲ್ಲ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ . ಆರೋಪಿಗೆ ಕುಳುಹಿಸಿದ ನೋಟಿಸನಲ್ಲಿ ತೋರಿಸಿರುವ ವಿಳಾಸದಲ್ಲಿ ಆರೋಪಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಕೀಲರ ಮೂಲಕ ಕಳುಹಿಸಿದ ನೋಟಿಸು ಆರೋಪಿಗೆ ತಲುಪಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನೋಟಿಸು ತಲುಪಿರುತ್ತದೆ ಎಂದು ನುಡಿದರು. ನಿಪಿ 5 ರಂತೆ ಕಳುಹಿಸಿದ ನೋಟಿಸಿನ ಮೇಲೆ ಅಂಚೆಯವರು ಯಾವುದೆ ಶರಾ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಅಂಚೆ ಕಚೇರಿಯವರು ಜಾರಿ ಮಾಡಲು ಹೋಗಿರುತ್ತಾರೆ ಆದರೆ ಆರೋಪಿಯು ತೆಗೆದುಕೊಂಡಿರುವುದಿಲ್ಲ ಎಂದು ನುಡಿದರು.

ಆರೋಪಿ ಕೆಲಸ ಮಾಡುವುದು ಮೈಸೂರಿನಲ್ಲಿ ಎಂದರೆ ಸರಿ . ಆರೋಪಿಯ ಕೆಲಸದ ಅವಧಿ ನನಗೆ ಗೊತ್ತಿಲ್ಲ. ಆರೋಪಿ ಕಚೇರಿ ಸಮಯ ಬೆಳಗ್ಗೆ 10.00 ಗಂಟೆಗೆ ಶುರು ಆಗಿ ಸಂಜೆ 6.00 ಗಂಟೆಗೆ ಮುಕ್ತಾಯವಾಗುತ್ತದೆ ಎಂದರೆ ಗೊತ್ತಿಲ್ಲ. ನಾನು ನೋಟಿಸು ಕಳುಹಿಸುವ ಸಮಯದಲ್ಲಿ ಆರೋಪಿ ನೋಟಿಸು ವಿಳಾಸದಲ್ಲಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮೈಸೂರಿನ ಪಿ ಜಿ ಯಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣ ನೀಡಿದೆ ಎಂದು ತೋರಿಸಲು ಯಾವುದೆ ದಾಖಲಾತಿ ಇಲ್ಲ ಎಂದರೆ ಸಾಕ್ಷಿಯು ಚೆಕ್ ನೀಡಿರುತ್ತಾರೆ ಎಂದು ನುಡಿದರು. ನಾನು ಆರೋಪಿಗೆ ಹಣವನ್ನು ಅವರ ಕೈಯಗೆ ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ಮಾರ್ಚ್ 10, 2022 ಕ್ಕೆ ಕೊಟ್ಟಿರಬಹುದು . ನಾನು

ಆರೋಪಿಗೆ ಬೆಳಗ್ಗೆ 8.00 ಗಂಟೆಗೆ ಹಣವನ್ನು ಕೊಟ್ಟಿರುತ್ತೇನೆ. ನಾನು ಆರೋಪಿಗೆ ಹಣವನ್ನು ನೀಡಿದೆ ಎಂದು ತೋರಿಸಲು ಯಾವುದೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಚೆಕ್ ನ್ನು ಮಾತ್ರ ನೀಡಿರುತ್ತೇನೆ ಎಂದು ನುಡಿದರು. ಚೆಕ್ ನ್ನು ಹೊರತುಪಡಿಸಿ ಬೇರೆ ಯಾವುದೆ ದಾಖಲಾತಿಯನ್ನು ಆರೋಪಿಯಿಂದ ಪಡೆದಿರುವುದಿಲ್ಲ. ನಾನು ಆರೋಪಿಗೆ ಹಣ ನೀಡುವ ಸಂದರ್ಭದಲ್ಲಿ ನಾನು ನನ್ನ ಮಗ ಮತ್ತು ಆರೋಪಿ ಇದ್ದರು. ಇವರನ್ನು ಹೊರತುಪಡಿಸಿ ಬೇರೆ ಯಾರೂ ಇರುವುದಿಲ್ಲ.

ಆರೋಪಿ ನನ್ನ ಮನೆಗೆ ಬಂದು ಹಣ ಪಡೆದುಕೊಂಡ ಹೋಗಬೇಕಾದರೆ ಅಕ್ಕ ಪಕ್ಕದವರು ಯಾರು ನೋಡಿರುವುದಿಲ್ಲ. ಆರೋಪಿಗೆ ಯಾವ ಮುಖ ಬೆಲೆಯ ನೋಟಿನಲ್ಲಿ ಹಣವನ್ನು ನೀಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಹಣ ನೀಡಬೇಕಾದರೆ ಆರೋಪಿಯ ಯಜಮಾನರಿಗೆ ನಾನು ಆರೋಪಿಗೆ ಹಣ ನೀಡುತ್ತಿದ್ದೇನೆ ಎಂದು ಹೇಳಿರುವುದಿಲ್ಲ . ಸಾಕ್ಷಿಯು ಮುಂದುವರೆದು ಆರೋಪಿ ನನಗೆ ಹಣ ವಾಪಸ್ಸು ನೀಡದಿದ್ದಾಗ ಅವರ ಯಜಮಾನರಿಗೆ ಆರೋಪಿ ಹಣ ನೀಡಿಲ್ಲ ಎಂದು ಹೇಳಿರುತ್ತೇನೆ ಎಂದು ನುಡಿದರು. ಆರೋಪಿಗೆ ನಾನು ಬಡ್ಡಿಗಾಗಿ ಹಣ ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿ ಎರಡು ತಿಂಗಳ ಒಳಗಡೆ ಹಣ ನೀಡುತ್ತೇನೆ ಎಂದು ಹೇಳಿ ಹಣವನ್ನು ಪಡೆದಿರುತ್ತಾರೆ ಎಂದು ನುಡಿದರು.

ನಾನು ಆರೋಪಿಗೆ ನೀಡಿದ ಹಣವನ್ನು ಮನೆ ಕಟ್ಟುವ ಸಲುವಾಗಿ ಮನೆಯಲ್ಲಿ ಇಟ್ಟಿದ್ದೆ . ಅದನ್ನು ಆರೋಪಿಗೆ ನೀಡಿರುತ್ತೇನೆ. ರೂ 2 ಲಕ್ಷ ಮನೆಯಲ್ಲಿ ಇಟ್ಟಿದ್ದೆ ಎಂದು ತೋರಿಸಲು ಯಾವುದೆ ದಾಖಲಾತಿ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ತೋಟ ಇದೆ ಮಗ ದುಡಿಯುತ್ತಿದ್ದರು ಎಂದು ನುಡಿದರು. ನನ್ನ ಮಗ ನನಗೆ ಹಣವನ್ನು ಅವರ ಖಾತೆಯಿಂದ ತೆಗೆದುಕೊಂಡು ತಂದು ಕೊಡಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ನಾನು ಮಾಡಿದ ವ್ಯವಹಾರಗಳು ಬ್ಯಾಂಕ ಮೂಲಕ ಆಗುತ್ತದೆ ಎಂದರೆ ಸಾಕ್ಷಿಯು ನನ್ನ ಕೈಗೆ ಹಣ ಬರುತ್ತದೆ ಎಂದು ನುಡಿದರು. ನನ್ನ ವಾರ್ಷಿಕ ವರಮಾನ ಎಷ್ಟು ಎಂದರೆ ಸಾಕ್ಷಿಯು ನಾನು ಟೈಲರಿಂಗ್ ಮತ್ತು ತೋಟದಲ್ಲಿ ಕೆಲಸ ಮಾಡುತ್ತೇನೆ ಅಂದಾಜು ಎಷ್ಟು ಬರುತ್ತದೆ ಎಂದು ನಾನು ಲೆಕ್ಕ ಮಾಡಿರುವುದಿಲ್ಲ. ತೋಟಗಾರಿಕೆಯಿಂದ ಖರ್ಚು ಎಲ್ಲಾ ಕಳೆದು ವಾರ್ಷಿಕವಾಗಿ ರೂ 2,50,000/- ಬರುತ್ತದೆ .

ನನ್ನ ಪ್ರಕಾರ ಟೈಲರಿಂಗ ಕೆಲಸ ಮಾಡುವುದರಿಂದ ತಿಂಗಳಿಗೆ ರೂ 35-45,000/- ಬರುತ್ತದೆ ಎಂದರೆ ಸಾಕ್ಷಿಯು ರೂ 20,000/- ಬರಬಹುದು ಎಂದು ನುಡಿದರು. ಸದರಿ ಹಣವನ್ನು ನಾನು ಬ್ಯಾಂಕ್ ನಲ್ಲಿ ಇಡುವುದಿಲ್ಲ. ಟೈಲರಿಂಗ್ ಕೆಲಸ ದಿಂದ ಬಂದ ಹಣವನ್ನು ನಾನು ಬುಕ್ ನಲ್ಲಿ ಬರೆಯುವುದಿಲ್ಲ. ನಾನು ಸರಕಾರದಿಂದ ಫಲಾನುಭುವಿಯಾಗಿ ಟೈಲರಿಂಗ್ ಸರ್ಟಿಫಿಕೇಟ್ ನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನನ್ನ ಬಳಿ ಬಿ ಪಿ ಎಲ್ ಕಾರ್ಡ್ ಇದೆ . ನಾನು ಪ್ರತಿ ತಿಂಗಳು ಅಕ್ಕಿಯನ್ನು ಸರಕಾರದಿಂದ ಪಡೆದುಕೊಳ್ಳುತ್ತೇನೆ. ನನಗೆ ವಾರ್ಷಿಕ ಆದಾಯ ರೂ 4,50,000/- ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ರೂ 4,50,000/- ಬರುವುದಿಲ್ಲ

ಎಂದು ನುಡಿದರು. ನನ್ನ ಬ್ಯಾಂಕ್ ವಹಿವಾಟಿನ ತಖ್ತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೆ ತೊಂದರೆ ಇರುವುದಿಲ್ಲ. ರೂ4,50,000/- ಆದಯ ಪಡೆದುಕೊಳ್ಳುವವರಿಗೆ ಬಿ ಪಿ ಎಲ್ ಕಾರ್ಡ ಕೊಡುವುದಿಲ್ಲ ಎಂಬ ನಿಯಮವಿದೆ ಎಂದರೆ ಗೊತ್ತಿಲ್ಲ. ನಾನು ಬಿ ಪಿ ಎಲ್ ಕಾರ್ಡ್ನು ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಬಿ ಪಿ ಎಲ್ ಕಾರ್ಡ್ ನಂಬರ ನನಗೆ ನೆನಪಿಲ್ಲ.  ಕರ್ನಾಟಕ ಸರಕಾರದವರು ಹೆಚ್ಚುವರಿ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಬರುತ್ತದೆ ಎಂದರೆ ಸಾಕ್ಷಿಯು ಯಾವುದೆ ಹಣ ಹಾಕಿರುವುದಿಲ್ಲ ಎಂದು ನುಡಿದರು.

ನಾನು ತೆರಿಗೆ ಪಾವತಿದಾರರಾಗಿರುವುದಿಲ್ಲ. ನನಗೆ ತೋಟವಿದೆ ಎಂದು ತೋರಿಸಲು ಅದಕ್ಕೆ ಸಂಬಂದಪಟ್ಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ಕುಟುಂಬದ ಹೆಸರಿನಲ್ಲಿ ತೋಟವಿರುತ್ತದೆ ಎಂದು ನುಡಿದರು. ನನಗೆ ತೋಟದಿಂದ ಬರುವ ಆದಾಯಕ್ಕೆ ಯಾವುದೆ ದಾಖಲಾತಿಗಳು ಇರುವುದಿಲ್ಲ ಎಂದರೆ ಸಾಕ್ಷಿಯು  ಜಮೀನು ಕುಟುಬಂದ ಹೆಸರಿನಲ್ಲಿದ್ದು ನಮಗೆ ಇಷ್ಟು ಎಂದು ಭಾಗ ಮಾಡಿಕೊಟ್ಟಿದ್ದಾರೆ ಎಂದು ನುಡಿದರು. ಭಾಗ ಮಾಡಿಕೊಟ್ಟಿದ್ದಾರೆ ಎಂದು ತೋರಿಸಲು ಯಾವುದೆ ದಾಖಲಾತಿ ಇರುವುದಿಲ್ಲ. ನಮಗೆ ತೋಟ ಶ್ರೀಮಂಗಲ , ಬೀರನಾಣಿ ಗ್ರಾಮದಲ್ಲಿ ಇರುತ್ತದೆ. ಬೀರನಾಣಿ ಗ್ರಾಮದಲ್ಲಿ ಇರುವ ಸ್ವತ್ತಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ನಾನು ತೋಟ ಮಾಡಿಕೊಂಡಿರುವ ಜಾಗ ಯಾವ ರೀತಿಯ ಜಮೀನು ಎಂದು ನನಗೆ ಗೊತ್ತಿಲ್ಲ. ಅದು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ನನಗೆ

ಮುಕ್ಕಾಲು ಎಕರೆ ಜಾಗ ಕುಟುಂಬವರು ಕೊಟ್ಟಿರುತ್ತಾರೆ. ಸಾಕ್ಷಿಯು ಮುಂದುವರೆದು ಅದು ಎಷ್ಟು ಗುಂಟೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ.

ನಾನು ನನಗೆ ಮೀಸಲಾದ ಜಾಗದಲ್ಲಿ ಕಾಪಿಯನ್ನು ಬೆಳಸಿ ಮಾರುತ್ತೇನೆ. ನನಗೆ ಬಂದ ಜಾಗದ ಜಮೀನಿನ ದಾಖಲಾತಿ ನನ್ನ ಬಳಿ ಇದೆ. ಅದು ನನ್ನ ಹೆಸರಿನಲ್ಲಿ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿಯು ಜಮೀನನ್ನು ನಮ್ಮ ಹೆಸರಿನಲ್ಲಿ ಬರೆದುಕೊಟ್ಟಿರುತ್ತಾರೆ ಎಂದು ನುಡಿದರು. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯವುದೆ ತೊಂದರೆ ಇರುವುದಿಲ್ಲ. ನನ್ನ ತೋಟದಲ್ಲಿ ಕಾಪಿ ಬೆಳೆಸುವುದಕ್ಕೆ ಮತ್ತು ಮಾರಾಟ ಮಾಡುವುದಕ್ಕೆ ದಾಖಲೆ ಬೇಕು ಎಂದರೆ ಸಾಕ್ಷಿಯು ನನ್ನ ಮಾವನ ಹೆಸರಿನಲ್ಲಿ ಎಲ್ಲಾ ಇರುತ್ತದೆ ಎಂದು ನುಡಿದರು. ಸಾಕ್ಷಿಯು ಮುಂದುವರೆದು ನನ್ನ ಮಾವ ಮಾರಾಟ ಮಾಡಿ ನಗದು ಹಣವನ್ನು ನನಗೆ ತಂದು ಕೊಡುತ್ತಾರೆ ಎಂದು ನುಡಿದರು. ಎಷ್ಟು ಚೀಲ ಕಾಪಿ ಬರುತ್ತದೆ ಎಂದರೆ ಸಾಕ್ಷಿಯು ನಾನು ಕುಯ್ದು ಇಟ್ಟು ಬರುತ್ತೇನೆ ಎಷ್ಟು ಚೀಲ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಮಾವನ ಹೆಸರು ಉತ್ತಯ್ಯ . ನನ್ನ ಮಾವನ ಹೆಸರಿನಲ್ಲಿ ಜಾಗವಿದ್ದು ನನ್ನ ಯಜಮಾನರ ತಮ್ಮನಾದ ಸುಬ್ಬಯ್ಯ ಅಲ್ಲಿಯಾಸ್ ದಾದ ರವರು ಕಾಪಿಯನ್ನು ಮಾರಾಟ ಮಾಡಿ ಹಣವನ್ನು ಕೊಡುತ್ತಾರೆ .

ನನ್ನ ಯಜಮಾನರ ತಮ್ಮನನ್ನು ಕರೆಯಿಸಿ ಸಾಕ್ಷಿ ಹೇಳಿಸಲು ಯಾವುದೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವರು ಬರುವುದಿಲ್ಲ ಎಂದು ನುಡಿದರು. ಕಾಪಿ ಮಾರಾಟ ಮಾಡಿದ ಹಣ ಮಾರಾಟ ಮಾಡಿದವರ ಖಾತೆಗೆ ಬರುತ್ತದೆ ಎಂದರೆ ಗೊತ್ತಿಲ್ಲ.

ನನಗೆ ಯಾವುದೆ ತೋಟ ಇರುವುದಿಲ್ಲ ಮತ್ತು ಅದರಿಂದ ಯಾವುದೆ ಆದಾಯ ಬರುತ್ತಿಲ್ಲ ಎಂದರೆ ಸರಿಯಲ್ಲ. ಸುಬ್ಬಯ್ಯರವರ ಕಡೆಯಿಂದ ದಾಖಲಾತಿಗಳನ್ನು ತರಿಯಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವರು ಕೊಡುವುದಿಲ್ಲ ಎಂದು ನುಡಿದರು. ನಾನು ಯಾವುದೆ ತರಹದ ಟೈಲರಿಂಗ್ ಮಾಡುತ್ತಿಲ್ಲ ಹಾಗೂ ಯಾವುದೆ ತೋಟದಿಂದ ಆದಾಯ ಬರುತ್ತಿಲ್ಲ ಹಾಗೂ ಆರೋಪಿಗೆ ಅಷ್ಟು ಹಣ ನೀಡಲು ನನಗೆ ಆರ್ಥಿಕ ಸಾಮಾರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಎಂದು ನುಡಿದರು. ನಾನು ಆರೋಪಿಗೆ ಹಣವನ್ನು ಖಾತೆಯು ಮೂಲಕ ವರ್ಗಾವಣೆ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನ್ನ ಕೈಯಲ್ಲಿದ್ದ ಹಣವನ್ನು ಆರೋಪಿಗೆ ನೀಡಿರುತ್ತೇನೆ ಎಂದು ನುಡಿದರು. ಆರೋಪಿಗೆ ಹಣವನ್ನು ಖಾತೆ ಮುಖಾಂತರ ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆರೋಪಿ ನಗದು ರೂಪದಲ್ಲಿ ಕೇಳಿದ್ದು ನಗದಾಗಿ ನೀಡಿರುತ್ತೇನೆ ಎಂದು ನುಡಿದರು.

ಬ್ಯಾಂಕ್ ನ ಮೂಲಕ ಹಣವನ್ನು ನೀಡಬೇಕು ಎಂದು ನನಗೆ ಗೊತ್ತಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದರು. ನಾನು ನನ್ನ ದೂರಿನಲ್ಲಿ ಅಥವಾ ನಾನು ಕಳುಹಿಸಿದ ನೋಟಿಸನಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆರೋಪಿಗೆ ಹಣವನ್ನು ನೀಡಿದ್ದೇನೆ ಎಂದು ತೋರಿಸಲು ಯಾವುದೆ ದಾಖಲೆಯ ಬಗ್ಗೆ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಚೆಕ್ ನ್ನು ಹೊರತುಪಡಿಸಿ ಬೇರೆ ಯಾವುದೆ ದಾಖಲಾತಿಯನ್ನು ನೀಡಿರುವುದಿಲ್ಲ ಎಂದು ನುಡಿದರು. ನನ್ನ ಆದಾಯದ

ಮೂಲಗಳನ್ನು ಪಿರ್ಯಾದಿನಲ್ಲಿ ಮತ್ತು ನೋಟಿಸನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಗೊತ್ತಿರಲಿಲ್ಲ ಎಂದು ನುಡಿದರು. ಆರೋಪಿಗೂ ನನಗೂ ಪರಿಚಯ ಇರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯು ನಮ್ಮ ಪಕ್ಕದ ಮನೆಯವರೇ ಎಂದು ನುಡಿದರು.

ನಾನು ಕಳುಹಿಸಸಿದ ನೋಟಿಸನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಮತ್ತು ದೂರಿನಲ್ಲಿ ಆರೋಪಿ ನನಗೆ 7-8 ತಿಂಗಳಿನಿಂದ ಪರಿಚಯ ಇದ್ದಾರೆ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯ ಪರಿಚಯ ಇತ್ತು ಅದರಲ್ಲಿ 7-8 ತಿಂಗಳಿನಿಂದ ಪರಿಚಯ ಇತ್ತು ಎಂದು ಬರೆಯಬೇಕು ಎಂದು ಗೊತ್ತಿರಲಿಲ್ಲ ಎಂದು ನುಡಿದರು. ಆರೋಪಿ ಪರಿಚಯವಿದಿದ್ದರೆ 7-8 ತಿಂಗಳಿನಿಂದ ಪರಿಚಯವಿದೆ ಎಂದು ನೋಟಿನಲ್ಲಿ , ಪ್ರಮಾಣ ಪತ್ರದಲ್ಲಿ ಮತ್ತು ದೂರಿನಲ್ಲಿ ಬರೆಯುತ್ತಿದ್ದೆ ಎಂದರೆ ಸಾಕ್ಷಿಯು ಆ ರೀತಿ ಬರೆಯಬೇಕು ಎಂದು ಗೊತ್ತಿರಲಿಲ್ಲ ಎಂದು ನುಡಿದರು . ಆರೋಪಿ ತನು ತಿಮ್ಮಯ್ಯರವರಿಗೆ ಚೆಕ್ ನೀಡಿದ್ದು ಅವರಿಂದ ನನ್ನ ಮಗ ಚೆಕ್ ನ್ನು ಪಡೆದು ಈ ರೀತಿ ದುರ್ಬಳಕೆ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಂಪೂರ್ಣವಾಗಿ ಖಾಲಿ ಚೆಕನ್ನು ಪಡೆದುಕೊಂಡು ಫೋರ್ಜರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೆ ಚೆಕ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿ ಪರಿಚಯ ಇರುವುದಿಲ್ಲ ಹಾಗೂ ಅವರಿಗೆ ವಂಚಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯನ್ನು ವಂಚಿಸುವ ಉದ್ದೇಶದಿಂದ ಸುಳ್ಳು ಪಿರ್ಯಾದಿಯನ್ನು ತಂದಿದ್ದೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯಲು ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಯಾವುದೆ ರೀತಿಯ ಹಣವನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಅವರು ಯಾವುದೆ ಹಣವನ್ನು ನೀಡಲು ಬದ್ಧರಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ